# ಎಲ್ಲಿಹೋಯಿತು ರುಂಡ


ಮುಸ್ಸಂಜೆಯ ಕೆಂಪಿನಲ್ಲಿ ಬಿಕೋ ಎನುವ ಬೀದಿಯಲ್ಲಿ
ನಿಂತಿದೆಯೊಂದು ಮುಂಡ
ಪ್ಯಾಂಟು ಷರ್ಟು ತೊಟ್ಟುಕೊಂಡು
ಗೋಡೆಗೊರಗಿಕೊಂಡು.
ಎಲ್ಲಿಹೋಯಿತು ಅದರ ರುಂಡ?
ಗೋಳಿಡುತ್ತಿದೆ ಎಲ್ಲಿ?
ಊಳಿಡುತ್ತಿವೆ ಯಾಕೆ ನಾಯಿಗಳಿಲ್ಲಿ?

ಮೊನ್ನೆಯೂ ಹೀಗೆಯೇ:
ಇನ್ನೊಂದು ಮುಂಡ ರಾಜಕಾಲುವೆಯಲ್ಲಿ
ಬರಿಮೈಯಾಗಿ ಗೋಣಿಚೀಲದಲ್ಲಿ.

ಯಾರವರು ಹೀಗೆ ರುಂಡಗಳನ್ನು
ಕೊಂಡೊಯ್ಯುವವರು?

ನಡೆಸಬಹುದೇ ಪೊಲೀಸರು
ಈ ಮುಂಡದ ತನಿಖೆ:
ಬಟ್ಟೆಬರೆ ಬಿಚ್ಚಿ?

ಆಮೇಲೆ ಹುಡುಕಿ ತರಬಹುದೆ ಸುಕ್ಕು
ಹಣೆಯ ಕುರುಚಲು ಗಡ್ಡದ
ಹಠಾತ್ತಾಗಿ ಅಳು ನಿಲ್ಲಿಸಿಬಿಟ್ಟ ಯಾವುದಾದರೊಂದು ರುಂಡ
ಈ ಮುಂಡಕ್ಕೆ?



ರಾತ್ರಿಯ ಬರಮಾಡಿಕೊಳ್ಳುತ್ತಿರುವ ಮುಸ್ಸಂಜೆ
ನಂಜೇರುತ್ತಿರುವ ಆಕಾಶ
ಅದರಂಚಿನ ಬಣ್ಣ ವಿಷಣ್ಣ